**ಓ ಎಸ್ ನಂ105/2017**
**ಪಿ. ಡಬ್ಲ್ಯೂ ಃ 1**

**ದಿಃ 28.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**
**ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಎ ಕೆ ಹೆಚ್ ವಕೀಲರಿಂದ ಃ**

ನನ್ನ ತಂದೆ ವಿಷಕಂಠಾಚಾರ್ ರವರನ್ನು ದೊಡ್ಡ ವಿಷಕಂಠಯ್ಯ ಎಂದು ಕರೆಯುತ್ತಿದ್ದರು ಎಂದರೆ ಸರಿ. ನನ್ನ ತಾಯಿಯ ಹೆಸರು ಸಾವಿತ್ರಮ್ಮ ಎಂದರೆ ಸರಿ. ನನ್ನ ತಂದೆ 2002 ರಲ್ಲಿ ನನ್ನ ತಾಯಿ 2006 ರಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆ ತೀರಿಕೊಳ್ಳುವ ತನಕ ದಾವಾ ಆಸ್ತಿಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ.

ನನ್ನ ತಂದೆಗೆ 1 ನೇ ಲಕ್ಷ್ಮೀದೇವಮ್ಮ, 2 ನೇ ರವರಾಗಿ ನಾನು, 3 ನೇ ಪಾರ್ವತಮ್ಮ , 4 ನೇ ರಾಜಮೂರ್ತಿ ಮತ್ತು 5 ನೇಯವರಾಗಿ ಸೌಭಾಗ್ಯಮ್ಮ ಎನ್ನುವ ಮಕ್ಕಳಿದ್ದೇವು ಎಂದರೆ ಸರಿ. ಲಕ್ಷ್ಮೀದೇವಮ್ಮ ನವರ ಮದುವೆಯನ್ನು 1969 ನೇ ಇಸವಿಯಲ್ಲಿ ಮಾಡಲಾಗಿರುತ್ತದೆ. ಸೌಭಾಗ್ಯಮ್ಮ ನವರು ಮದುವೆಯಾಗಿರುವುದಿಲ್ಲ, ಪಾರ್ವತಮ್ಮ ನವರ ಮದುವೆಯು 1987 ರಲ್ಲಿ ಆಗಿರುತ್ತದೆ. ನನ್ನ ಮದುವೆಯು 1987 ರಲ್ಲಿ ಆಗಿರುತ್ತದೆ. ನನ್ನ ತಮ್ಮ ರಾಜಮೂರ್ತಿ ರವರ ಮದುವೆಯು ನನ್ನ ಮದುವೆಯಾದ ನಂತರ ಆಗಿರುತ್ತದೆ. ರಾಜಮೂರ್ತಿರವರ ಹೆಂಡತಿ ಕುಣಿಗಲ್ ತಾ. ನ ಆತ್ರಿಘಟ್ಟ ಗ್ರಾಮದವರಾಗಿರುತ್ತಾರೆ. ಅವರು ನಮಗೆ ಹೊಸ ಸಂಬಂಧ ಆಗಿರುತ್ತದೆ.

ದಾವಾ ಐಟಂ ನಂಬರ್ 5 ಕ್ಕೆ ಸಂಬಂದಪಟ್ಟ ಕ್ರಯದ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ದಾವಾ ಐಟಂ ನಂಬರ್ 5 ನಮ್ಮ ತಂದೆಯವರಿಗೆ ಸರ್ಕಾರದಿಂದ ಮಂಜೂರಾಗಿರುವ ಜಮೀನಾಗಿರುತ್ತದೆ. ನನ್ನ ವಾದಪತ್ರದಲ್ಲಿ ಐಟಂ ನಂಬರ್ 1 ರಿಂದ 5 ಗಳನ್ನು ಕ್ರಯಕ್ಕೆ ನನ್ನ ತಂದೆಯವರು ಪಡೆದಿರುವ ಸ್ವತ್ತು ಎಂದು ಹೇಳಿರುವ ವಿಷಯ ಸುಳ್ಳಾಗಿರುತ್ತಾ ಎಂದರೆ ಸುಳ್ಳು ಎಂದು ಹೇಳಲು ಆಗುವುದಿಲ್ಲ ಮತ್ತು ನಿಜ ಎಂದು ಹೇಳಲು ಆಗುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**
**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಮಾಗಡಿ**